8. ಅಲ್ಪಸಂಖ್ಯಾತರಿಗಾಗಿ ಸಮುದಾಯ ಭವನ : ಶಾದಿಮಹಲ್‌ಗಳ ನಿರ್ಮಾಣ
9. ಅಲ್ಪಸಂಖ್ಯಾತರ ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿ ನಿಲಯಗಳು
10. ಅಲ್ಪಸಂಖ್ಯಾತರಿಗೆ ವೃತ್ತಿಪರ ತರಬೇತಿ
11. ಅಲ್ಪಸಂಖ್ಯಾತರ ಹಾಸ್ಪೆಲ್ ಕಟ್ಟಡ ನಿರ್ಮಾಣ
12. ಅನಾಥಾಲಯಗಳಿಗೆ ಸಹ ಸಹಾಯಧನ ನೀಡಿಕೆ
13. ಸ್ವಾವಲಂಬನ ಸಾಲದ ಯೋಜನೆ
14. ಗಂಗಾ ಕಲ್ಯಾಣ ಯೋಜನೆ
15. ವೃತ್ತಿ ಆಧಾರಿತ ತರಬೇತಿ ಯೋಜನೆ

ಮೀನುಗಾರಿಕಾ ಕ್ಷಾಮ

418(682) ಶ್ರೀ ಸಭಾಪತಿ ಯು.ಆರ್. (ಉಡುಪಿ) : ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. 2000-01, 2001-02, 2002-03ರ ಮೀನುಗಾರಿಕಾ ಋತುವಿನಲ್ಲಿ (ಆಗಸ್ಟ್ 1 ರಿಂದ ಮೇ ರವರೆಗೆ ಹಾಗೂ 31-1-2003ರವರೆಗೆ) ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ ಉಡುಪಿ ಮತ್ತು ಉತ್ತರ ಕನ್ನಡದಲ್ಲಿ ಕರಾವಳಿ ಮೀನುಗಾರರು ಹಿಡಿದ ಮೀನಿನ ವಿವರಗಳನ್ನು ನೀಡುವುದು (ಟನ್ನು ಮತ್ತು ಹಣದ ಮೊತ್ತದಲ್ಲಿ)?

ಆ. ಸರ್ಕಾರ 2002-2003ರ ಸಾಲಿನ ಮೀನು ಗಾರಿಕಾ ಋತುವಿನಲ್ಲಿ ಮೀನುಗಾರಿಕಾ ಕ್ಷಾಮ ಎಂದು ಘೋಷಿಸಲಾಗುವುದೆ;

ಇ. ವರ್ಷಂಪ್ರತಿ ಮೀನುಗಾರಿಕಾ ಉತ್ಪನ್ನ (ಕರಾವಳಿಗೆ ಸೀಮಿತಗೊಂಡಂತೆ) ಕಡಿಮೆಯಾಗುತ್ತಾ ಹೋಗುವುದರ ಬಗ್ಗೆ ಸರ್ಕಾರ ಅಧ್ಯಯನ ನಡೆಸಿದ್ದರೆ ಅದರ ವರದಿಯ ವಿವರ ಏನು;

ಈ. ಮೀನುಗಾರಿಕಾ ಉತ್ಪನ್ನ ಹೆಚ್ಚಿಸಲು ಸರ್ಕಾರ ತೆಗೆದುಕೊಂಡ ಕ್ರಮವೇನು?

ಶ್ರೀ ವಸಂತ ವಿ. ಸಾಲಿಯಾನ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು)

ಅ. ಕರಾವಳಿ ಮೀನುಗಾರರು ಹಿಡಿದ ಮೀನಿನ ವಿವರಗಳು ಕೆಳಕಂಡಂತೆ ಅಂದಾಜು ಮಾಡಲಾಗಿದೆ

ಜಿಲ್ಲೆ	2000-2001		2001-2002		2002-2003	
	ಪ್ರಮಾಣ	ಮೌಲ್ಯ	ಪ್ರಮಾಣ	ಮೌಲ್ಯ	ಪ್ರಮಾಣ	ಮೌಲ್ಯ
ದಕ್ಷಿಣ ಕನ್ನಡ	79186	10616.36	50812	8786.29	48866	10332.53
ಉಡುಪಿ	61723.42	7030.66	56328.71	7036.05	38050.4	5745.17
ಉತ್ತರ ಕನ್ನಡ	30121.9	5011.82	28251.6	4658.83	21863.8	3346.76

ಆ. ಈ ಬಗ್ಗೆ ಪ್ರಸ್ತಾವನೆ ಇರುವುದಿಲ್ಲ

ಇ. ಯಾವುದೇ ಅಧ್ಯಯನ ನಡೆಸಿರುವುದಿಲ್ಲ

ಉ. ಮಳೆಗಾಲದಲ್ಲಿ ಯಾಂತ್ರಿಕ ಮೀನುಗಾರಿಕೆಯನ್ನು ನಿಷೇಧಿಸುವ ಮೂಲಕ ಮೀನುಗಳ ಸಂತಾನೋತ್ಪತ್ತಿಗೆ ಅವಕಾಶ ಕಲ್ಪಿಸಲಾಗುತ್ತಿದೆ. ದೇಶದ ಪಶ್ಚಿಮ ಕರಾವಳಿಯಲ್ಲಿ ಏಕಕಾಲದ

ಮೊನುಗಾರಿಕೆ ನಿಷೇಧಿತ ಅವಧಿಯನ್ನು ಘೋಷಿಸಲು ಕೇಂದ್ರ ಸರ್ಕಾರವನ್ನು ಒತ್ತಾಯಿಸಲಾಗಿದೆ. ಮೊನುಗಾರಿಕೆ ದೋಣಿಗಳ ಸಂಖ್ಯೆಯು ಹೆಚ್ಚುವುದು ತಡೆಯಲು ಹೊಸದಾಗಿ ದೋಣಿಗಳ ಸೇರ್ಪಡೆಯನ್ನು ಮಿತಿಗೊಳಿಸಲಾಗಿದೆ.

ಹಿಂದುಳಿದ ವರ್ಗಗಳ ವಸತಿ ಗೃಹಗಳು

420(685) ಶ್ರೀ ಯು.ಆರ್. ಸಭಾಪತಿ (ಉಡುಪಿ): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ರಾಜ್ಯದ ವಿವಿಧ ಜಿಲ್ಲೆಗಳಲ್ಲಿರುವ ಪರಿಶಿಷ್ಟ ವರ್ಗ ಹಾಗೂ ಪಂಗಡ ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿ ವಸತಿನಿಲಯಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)?

2. ಈ ವರ್ಗಗಳಿಗೆ 2002-03ರ ಸಾಲಿನಲ್ಲಿ ಮಂಜೂರಾಗಿರುವ ಹೊಸ ವಿದ್ಯಾರ್ಥಿನಿಲಯಗಳು ಎಷ್ಟು; (ಜಿಲ್ಲಾವಾರು ವಿವರ ನೀಡುವುದು)?

3. 2003-04ರ ಸಾಲಿನಲ್ಲಿ ಎಷ್ಟು ವಿದ್ಯಾರ್ಥಿನಿಲಯಗಳು ಮಂಜೂರು ಮಾಡಲಾಗುವುದು?

4. 2001-02, 2002-03ರ ಸಾಲಿನಲ್ಲಿ ರಾಜ್ಯದಲ್ಲಿ ಹೊಸದಾಗಿ ಕಟ್ಟಲಾದ ವಿದ್ಯಾರ್ಥಿನಿಲಯಗಳು ಎಷ್ಟು ಹಾಗೂ ಇದಕ್ಕೆ ಬಿಡುಗಡೆಯಾದ ಹಣವೆಷ್ಟು? (ವಿವರ ನೀಡುವುದು);

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

	ಪರಿಶಿಷ್ಟ ಜಾತಿ	ಪರಿಶಿಷ್ಟ ವರ್ಗ	ಹಿಂದುಳಿದ ವರ್ಗ
ಒಟ್ಟು	1832	142	1397

ಜಿಲ್ಲಾವಾರು ವಿವರವನ್ನು ಅನುಬಂಧದಲ್ಲಿ ತೋರಿಸಲಾಗಿದೆ.

2. 2002-03ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ/ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗಾಗಿ ಹೊಸದಾಗಿ ವಿದ್ಯಾರ್ಥಿನಿಲಯಗಳನ್ನು ಮಂಜೂರು ಮಾಡಿರುವುದಿಲ್ಲ. ಆದರೂ ಹಿಂದೆ ಮಂಜೂರು ಮಾಡಲಾದ ವಿದ್ಯಾರ್ಥಿನಿಲಯಗಳನ್ನು ಈ ಸಾಲಿನಲ್ಲಿ ಪ್ರಾರಂಭಿಸಲಾಗುವುದು.

ಪರಿಶಿಷ್ಟ ಪಂಗಡದ ಮೆಟ್ರಿಕ್-ಪೂರ್ವ/ಮೆಟ್ರಿಕ್-ನಂತರದ ಬಾಲಕ /ಬಾಲಕಿಯರ ಒಟ್ಟು 19 ವಿದ್ಯಾರ್ಥಿನಿಲಯಗಳನ್ನು ಮಂಜೂರುಗೊಳಿಸಲಾಗಿದೆ.

3. ಆಯವ್ಯಯದ ಲಭ್ಯತೆ ಮೇರೆಗೆ ಪರಿಶೀಲಿಸಲಾಗುವುದು.

4. (ರೂ.ಲಕ್ಷಗಳಲ್ಲಿ)

	ಅವಧಿ	ಹೊಸದಾಗಿ ಕಟ್ಟಲಾದ ವಿದ್ಯಾರ್ಥಿ ನಿಲಯಗಳ ಸಂಖ್ಯೆ	ಬಿಡುಗಡೆಯಾದ ಹಣ
ಪರಿಶಿಷ್ಟ ಜಾತಿ	2001-02	28	801-53
	2002-03	30	857.03
ಪರಿಶಿಷ್ಟ ವರ್ಗ	2001-02	4	86.31
	2002-03	4	90.50
ಹಿಂದುಳಿದ ವರ್ಗ	2001-02	128	1198.75
	2002-03		